# ನಿನ್ನ ಒಲುಮೆಗೆ ನಾನು ಈಡೇನೊ ರಂಗ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 329.
2. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao, page No. 393.
3. **Note:** This song is not available in the books of Shri Betageri Krishna Sharma and Shri Bengeri Huchha Rayaru and also in the books of Samagra Dasa Sahitya, published by Kannada & Culture Dept., Govt of Karnataka, Bengaluru and also in the books of Gorebala Hanumantha Rayaru.
4. **Note:** Lyrics given here are as per Ref. 1. The wordings in Ref. 2 are same as in Ref. 1.
5. **Note:** Singer has followed these lyrics.

ರಾಗ: ಕಾಂಭೋಜ ತಾಳ: ಝಂಪೆ

ನಿನ್ನ ಒಲುಮೆಗೆ ನಾನು ಈಡೇನೊ ರಂಗ || ಪ ||
ಸಣ್ಣವನು ನಾನಯ್ಯ ಪನ್ನಗಾಚಲವಾಸ || ಅಪ ||

ಅಜಿತ ನಾಮಕ ನೀನು, ಅಲ್ಪ ಶಕ್ತನು ನಾನು
ಕುಜನ ದೂಷಕ ನೀನು, ಅವರ ಮಿತ್ರನು ನಾನು
ವ್ರಜದ ಸ್ತ್ರೀಯರ ಮನವ ಸೂರೆಗೊಂಡ ಸ್ವಾಮಿ
ಅಜನ ಪೆತ್ತ ನಿನಗೆ ಸರಿಯಾರು ಪೇಳಯ್ಯ || 1 ||

ಅನೇಕ ಅದ್ಭುತ ಚರಿತ್ರ, ಪಿಡಿದೆ ಹೇಸಿಕೆ ಮಾರ್ಗ
ಅನೇಕ ಭಕ್ತರ ಪೋಷ, ನಾನವರ ದೂಷಕ
ಅನೇಕ ಬಾಹುಗಳು ಮತ್ತನೇಕ ಪಾದಗಳಯ್ಯ
ಅನೇಕ ದಿವ್ಯಾಭರಣ ವಿಶ್ವರೂಪ ನಿನಗೆ || 2 ||

ಪರಮ ಪಾವನ ನೀನು, ದುಷ್ಟ ತರಳನು ನಾನು
ಕರುಣಾಬ್ಧಿಯು ನೀನು, ಕಠಿಣ ಚಿತ್ತ ನಾನು

ಶರಣೆಂಬೆ ಗಿರಿರಾಯ ನಿನ್ನ ಪೋಲುವರುಂಟೆ
ಮರಳಿ ಪುಟ್ಟದೆ ಮಾಡು ತಂದೆ ಪುರಂದರ ವಿಠಲ || 3 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

**ಈಡೇನೋ** – ಸರಿಯೇ? ಸಮಾನನೇ?

**ಪನ್ನಗಾಚಲ** – ಶೇಷಾಚಲ (ತಿರುಮಲೆಯ ಬೆಟ್ಟಗಳಲ್ಲೊಂದು).

**ಆಜಿತ** – ಸರ್ವಶಕ್ತ.

**ಕುಜನದೂಷಕ** – ಕೆಟ್ಟವರನ್ನು ಭಂಗಪಡಿಸುವವ.

**ವ್ರಜ** – ಗೋಕುಲ.

**ಆಜನ ಪೆತ್ತ** – ಬ್ರಹ್ಮನನ್ನು ತನ್ನ ನಾಭಿಕಮಲದಿಂದ ಹೊರಹೊಮ್ಮಿಸಿದ.

**Classification:** Keerthane
**Ankita:** tande purandara vittala
**Location:** NA
**Category:** Vishnu Stuti
**Sub-Category:** Vishnu, srinivasa, Tirupati, olume, ranga, mitra, hengasu, gokula, mana, brahma, Narayana, daari, abharana, karuna, chitta, sharana, huttu,
**Pravachana:** NA
**Explanation:** NA